541

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 288 |
| ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತ) |
| ಉತ್ತರಿಸಬೇಕಾದ ದಿನಾಂಕ | 29.01.2026 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2025-26ರ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿದ, ಸರ್ಕಾರ ಮಂಜೂರು ಮಾಡಿರುವ ಮತ್ತು ಡಿಸೆಂಬರ್-2025ರವರೆಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ಇಲಾಖಾವಾರು ವಿವರಗಳನ್ನು ನೀಡುವುದು) | 2025-26ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಿದ ಅನುದಾನ ಮತ್ತು 27ನೇ ಜನವರಿ, 2026ರ ಅಂತ್ಯಕ್ಕೆ ಲೆಕ್ಕದನ್ವಯ ವೆಚ್ಚವಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ | ಬಿಡುಗಡೆ ಮಾಡಿರುವ ಅನುದಾನದ ಹಣದಲ್ಲಿ ಇಲಾಖೆವಾರು ವೆಚ್ಚ ಮಾಡಿರುವ ಹಣ ಎಷ್ಟು; ಅನುದಾನದಲ್ಲಿ ಎಷ್ಟು ಹಣ ಖರ್ಚು ಆಗದೆ ಉಳಿದಿದೆ; (ಇಲಾಖಾವಾರು ವಿವರ ನೀಡುವುದು) | ಆಯವ್ಯಯದಲ್ಲಿ ಪ್ರತಿ ಇಲಾಖೆಗೆ ಯೋಜನವಾರು ಅನುದಾನಗಳನ್ನು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಹಂಚಿಕೆ ಮಾಡಲಾದ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಬಳಸಿಕೊಳ್ಳುವುದು ಎಲ್ಲಾ ಆಡಳಿತ ಇಲಾಖೆಗಳ ಜವಾಬ್ದಾರಿಗಳಾಗಿರುತ್ತದೆ. |
| ಇ | ಮಂಜೂರು ಮಾಡಿದ್ದ ಎಷ್ಟು ಅನುದಾನವನ್ನು ಬೇರೆ ಇಲಾಖೆಗೆ ಮರುಹಂಚಿಕೆ ಮಾಡಲಾಗಿದೆ; ಮರುಹಂಚಿಕೆಯಾದ ಅನುದಾನ ಯಾವ ಉದ್ದೇಶಕ್ಕೆ ಬಳಕೆ ಆಗಿದೆ; (ವಿವರಗಳನ್ನು ನೀಡುವುದು) | ಬೇಡಿಕೆವಾರು ಇಲಾಖೆಯಲ್ಲಿ ಅನುದಾನದ ಕೊರತೆ ಎದುರಾದಲ್ಲಿ, ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಅನ್ವಯ ಇಲಾಖೆ ಹಂತದಲ್ಲಿ ಮತ್ತು ಆಯವ್ಯಯ ಕೈಪಿಡಿ ಅನ್ವಯ ಆರ್ಥಿಕ ಇಲಾಖೆ ಹಂತದಲ್ಲಿ ಬೇಡಿಕೆಯೊಳಗಿನ ಇಲಾಖೆಗಳ ನಡುವೆ ಮರುಹಂಚಿಕೆ ಮಾಡಲಾಗುವುದು.<br><br>ಪ್ರಸ್ತುತ 2025-26 ನೇ ಸಾಲಿನಲ್ಲಿ 205 ಲಕ್ಷಗಳನ್ನು ವೇತನಕ್ಕಾಗಿ ಇಲಾಖೆಗಳ ನಡುವೆ ಮರುಹಂಚಿಕೆ ಮಾಡಲಾಗಿದೆ. |
| ಈ | 2025-26 ಆಯವ್ಯಯದಲ್ಲಿ ನಗರಾಭಿವೃದ್ಧಿಯಲ್ಲಿ ಬೆಂಗಳೂರು ನಗರದ ಮೂಲಸೌಲಭ್ಯ ಅಭಿವೃದ್ಧಿಗೆ ರೂ.7,000 ಕೋಟಿ ಅನುದಾನವನ್ನು ನೀಡಲಾಗಿದ್ದು, ಈ ಅನುದಾನದಲ್ಲಿ ಡಿಸೆಂಬರ್-2025ರವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ಈ ಅನುದಾನದಲ್ಲಿ ಎಷ್ಟು ಹಣ ಬಳಕೆಯಾಗಿದೆ; ಯಾವ ಮೂಲಸೌಲಭ್ಯಗಳ ಅಭಿವೃದ್ಧಿಗೆ ಈ ಹಣ ಬಳಸಲಾಗಿದೆ? (ಸಂಪೂರ್ಣ ವಿವರ ನೀಡುವುದು) | ಹಿಂದಿನ ಬಿಬಿಎಂಪಿ/ಜಿ.ಬಿ.ಎ.ಗೆ ವಿಶೇಷ ಮೂಲಭೂತ ಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ ಡಿಸೆಂಬರ್-2025ರವರೆಗೆ ರೂ.2250.00 ಕೋಟಿಗಳು ಸರ್ಕಾರದಿಂದ ಬಿಡುಗಡೆಯಾಗಿ ಪಾವತಿ ಮಾಡಲಾಗಿದೆ. |

**ಸಂಖ್ಯೆ: ಆಇ 25 ಜಿಬಿಇ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ